# ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು, ನಂಜನಗೂಡು ತಾ॥, ಮೈಸೂರು ಜಿಲ್ಲೆ॥

## ಸಾಧನೆ ಸಾಮಾಜಿಕ ಮನೋಧರ್ಮವುಳ್ಳದ್ದಾಗಿಬೇಕು

**ಸುತ್ತೂರು, ಆಗಸ್ಟ್-9**: ಶಿವಶರಣರ ನುಡಿಯಂತೆ ಸಾಧನೆ ಸಾಮಾಜಿಕ ಮನೋಧರ್ಮವುಳ್ಳದ್ದಾಗಿರಬೇಕು ಎಂದು ಪ್ರಾಧ್ಯಾಪಕರಾದ ಶ್ರೀ ಹೆಚ್.ಬಿ. ದೇವಣ್ಣನವರು ಆಗಸ್ಟ್ 9ರಂದು ಸುತ್ತೂರು ಶ್ರೀ ಮಠದಲ್ಲಿ ಶ್ರಾವಣಮಾಸದ 12ನೇ ದಿನದ ಪ್ರವಚನದಲ್ಲಿ ತಿಳಿಸಿದರು.

ಸದ್ಭಕ್ತಿಯಿಂದ ಪರಶಿವನನ್ನು ನಯ, ವಿನಯ, ಸದಾಚಾರಗಳಿಂದ ಜನಮನವನ್ನು ಒಲಿಸಿಕೊಂಡ ಶಿವಶರಣರು ನುಡಿದಂತೆ ನಡೆದರು. ಸತ್ಯ-ಸಾಕ್ಷಾತ್ಕಾರ, ಶಿವನಲ್ಲಿ ಒಂದಾಗುವುದು ಜೀವನದ ಪರಮಗುರಿ. ಅದನ್ನು ಸಾಧಿಸಬೇಕಾದರೆ ಭಕ್ತಿಯ ಮಾರ್ಗ ಪರಮೋತ್ಕೃಷ್ಟವಾದುದು. ಭಕ್ತಿಗೆ ನಂಬಿಕೆಯೇ ಆಧಾರ. ಮನಸ್ಸಿನ ದಾಸರಾಗಿ ನಾನಾ ದುಃಖ ಕ್ಲೇಶಗಳಿಗೆ ಒಳಗಾಗಿ ಅರಿಷಡ್ವರ್ಗಗಳ ಜೊತೆಗೆ ಅಹಂಕಾರ, ಮಮಕಾರ, ಸಂಶಯಗಳಿಂದ ಕೂಡಿ ವೈಯಕ್ತಿಕವಾದ ಬದುಕಲ್ಲದೇ, ಸಮಾಜದ ಬದುಕನ್ನೂ ಹದಗೆಡಿಸುವ ಸಾಧನೆ ಶಿವಶರಣರ ದೃಷ್ಟಿಯಲ್ಲಿ ಸಾಧನೆಯಾಗಲಾರದು. ವ್ಯಕ್ತಿಯ ವಿಕಾಸಕ್ಕಾಗಿ ಸಮಾಜ ಮುಖ್ಯ, ಸಮಾಜದ ಕಲ್ಯಾಣಕ್ಕಾಗಿ ವ್ಯಕ್ತಿ ಮುಖ್ಯ. ಆತ್ಮೋದ್ಧಾರಕ್ಕಾಗಿ ಸದ್ಭಕ್ತಿಯನ್ನು ಉತ್ತಮ ಸಾಮಾಜಿಕ ಪರಿಸರ ನಿರ್ಮಾಣಕ್ಕಾಗಿ ಸದಾಚಾರವನ್ನು ರೂಢಿಸಿಕೊಳ್ಳಬೇಕು.

ಪ್ರತಿಯೊಬ್ಬ ವ್ಯಕ್ತಿಯೂ ಆತನ ಹಾಗೂ ಸಮಾಜದ ಒಳಿತಿಗಾಗಿ ಒಂದು ರೀತಿಯ ಕಟ್ಟುಪಾಡಿಗೆ ಒಳಗಾಗಿರಬೇಕು. ಲೌಕಿಕ ಬದುಕಿಗಾಗಲಿ, ಪಾರಮಾರ್ಥಿಕ ಸಾಧನೆಗಾಗಲಿ ಅಂತರಂಗ ಹಾಗೂ ಬಹಿರಂಗ ಶುದ್ಧಿಗಳು ಅವಶ್ಯಕ. ಸುಸಂಸ್ಕೃತ ಲಕ್ಷಣವಾದ ಪ್ರೀತಿ ತುಂಬುವ ಶಿಷ್ಟ ನಡವಳಿಕೆಯನ್ನು ಮಕ್ಕಳಿಗೆ ಬಾಲ್ಯದಿಂದಲೇ ಕಲಿಸಬೇಕು. ಕೇವಲ ಮಾತಿನಲ್ಲಿ ನಯ, ವಿನಯ, ಮಾಧುರ್ಯ ಇದ್ದರೆ ಸಾಲದು. ಹೃದಯಪೂರ್ವಕ ಪ್ರೀತಿ, ಸ್ನೇಹ ಭಾವಗಳಿಂದ ಮನಸ್ಸು ಶುದ್ಧವಾಗಿರಬೇಕು. ನೊಸಲಿಗೆ ವಿಭೂತಿ, ಕೊರಳಿಗೆ ರುದ್ರಾಕ್ಷಿ ಸರ್ವಶ್ರೇಷ್ಠ. ಶಿವನಿಗಂತ ಶಿವನಾಮವೇ ಶ್ರೇಷ್ಠ ಎಂದು ತಿಳಿಸಿದರು.

ಗಮಕಿಗಳಾದ ಶ್ರೀ ಡಿ.ಎಂ ಸಿದ್ದಲಿಂಗಸ್ವಾಮಿಯವರು ಕಾವ್ಯ ವಾಚಿಸಿದರು. ಶ್ರೀಮತಿ ಎಸ್.ಜಿ. ನಾಗವೇಣಿ ಮತ್ತು ಶ್ರೀ ಹಚ್.ಎಸ್. ಕೃಷ್ಣಮೂರ್ತಿ ಸೇವಾರ್ಥ ನೆರವೇರಿಸಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.